ಮೂಕವಿಸ್ಮಿತರಾಗಿ ಬೆರಗುಗಣ್ಣಿಂದ ನೋಡುತ್ತಿದ್ದರು. ಕೆಲವೊಮ್ಮೆ ಪರಸ್ಪರ ಮೂಕಾಭಿನಯ ಮಾಡಿ, ಸಂಕೇತ ಭಾಷೆ ವಿನಿಮಯ ಮಾಡಿ ಮಂಗನಾಟವಾಡುತ್ತಾ ಮುಸುಮುಸು ನಗುತ್ತಿದ್ದರು. ಬಾಲ್ಯದಲ್ಲಿ ಚೌರಮಾಡಿಸಿಕೊಳ್ಳಲು ರೆಡಿಯಾಗಿ ನಾವು ಒಮ್ಮೆಯಾದರೂ ಹೀಗೆ ನಕ್ಕದ್ದುಂಟೇ?

ನೆನಪು ಬೆದಕಿದೆ. ದಾಖಲೆಗೆ ಒಂದೇ ಒಂದು ಕೂಡ ಸಿಗಲಿಲ್ಲ! ಮೂಲೆಮೂಲೆಯಲ್ಲಿ ಅವಿತ ನಮ್ಮನ್ನು ಹಿರಿಯರು ಹುಡುಕಿ ದರದರನೆಳೆದು ತಂದು ಕಟುಕನ ಕೈಗೆ ಒಪ್ಪಿಸುವ ಕುರಿ ಮರಿಯಂತೆ, ತುದಿಗಾಲಿನಲ್ಲಿ ಕುಳಿತ "ಒಕ್ಕಣ್ಣ ಶುಕ್ರಾಚಾರಿ" (ಬಲಗಣ್ಣು ಹೂಕುಳಿತು ಕುರುಡಾಗಿತ್ತು). ಕ್ಷೌರಿಕ ತಮ್ಮನ ಪದತಲಕ್ಕೆ ತಳುತ್ತಿದ್ದರು. ಆ ಶನಿ ಮಹಾಶಯನೋ ಗಬಕ್‌ನೇ ಹಿಡಿದು ಮೊಣಕಾಲು, ತೊಡೆಸಂದಿಯಲ್ಲಿ ನಮ್ಮ ತಲೆ ತುರಕಿಸಿ ಅಬಗಚ್ಚಿ ಹಣಿಗೆ, ಒಡ್ಡು ಕತ್ತರಿ, ರೇಜರ್ (ಕೂಪು) ಆಡಿಸುತ್ತಾ, ನಿರ್ದಯನಾಗಿ ಹಿರಿಯರ ಆಜ್ಞೆಗೆ ಮೇರೆಗೆ ಹಜಾಮ! ಒಡ್ಡುಗತ್ತಿ ಉರಿ ಜೊತೆಗೆ ಜಡ್ಡುಗಟ್ಟಿದ ಪಂಚೆ, ಅಂಗಿ ಮುಗ್ಗಲು ವಾಸನೆ. ಬಾಯಿ ಬೇರೆ ಬೀಡಿ, ಸರಾಯಿ ಗಬ್ಬುನಾತ. ನಮ್ಮ ಅಳು, ಬೊಬ್ಬೆ, ರಂಪಾಟ, ಕೇಳುವವರು ಯಾರು? ನರಕ... ನರಕ!...

ಕ್ರಾಪ್ ಬಿಡುವ ಫ್ಯಾಶನ್ ಆಗಿನ್ನೂ ಚಾಲ್ತಿಗೆ ಬಂದಿರಲಿಲ್ಲ. ಬಾಂಬ್ರೆಲ್ಲಾ ತಲೆ ಬೋಡು ಹೊಡೆಸಿ, ನೆತ್ತಿ ಮೇಲೆ ಗೋಪಾದ ಇಲ್ಲಾ ಅಂಟೆನಾ ತರದ ಪಿಳ್ಳು ಜುಟ್ಟೇ ಆ ಕಾಲದ ಫ್ಯಾಶನ್. ಶೂದ್ರರು ಮುಂದಲೆ ಅರ್ಧಚಂದ್ರಾಕಾರ ನುಣ್ಣಗೆ ಬೋಳಿಸಿ ಹಿಂಬದಿ ಕೂದಲು ಬಿಟ್ಟು ಜುಟ್ಟು ಕಟ್ಟುತ್ತಿದ್ದರು. ಕೆಲವೊಮ್ಮೆ ಆ ಜುಟ್ಟಿಗೆ ಹೂ ಮುಡಿದರಂತೂ ಸಂಭ್ರಮ! ವಿಶೇಷ ಸಭೆ, ಸಮಾರಂಭಗಳಲ್ಲಿ ಕರಿಟೋಪಿ ಧರಿಸುವುದು ಆ ಕಾಲಕ್ಕೊಂದು ಮೆಹರುಬಾನಿ! (ತಲೆಗೆ ಗಪ್ಪಾದ ಕಪ್ಪು ಟೋಪಿ, ಕಿವಿಯಲ್ಲಿ ಒಂಟಿ, ಬಿಗೀ ಕರೀ ಕೋಟು, ಕಚ್ಚೆಪಂಚೆ ಹಿರಿಯರು, ಹೆಂಡತಿ ಮಕ್ಕಳೊಂದಿಗೆ ಜಾತ್ರೆಗಳಲ್ಲಿ ಬೆಚ್ಚಿಬಿದ್ದವರಂತೆ ಫೋಸ್ ನೀಡಿ ತೆಗೆಸಿದ ಬಣ್ಣ ಮಾಸಿದ ಫೋಟೊ, ಹಳೇಕಾಲದ ಹಳ್ಳಿಮನೆ ಚಾವಡಿ ಕರಿ ಹಿಡಿದ ಗೋಡೆ ಮೇಲೆ ನಿಮ್ಮ ಕಣ್ಣಿಗೆ ಬಿದ್ದಿರಬಹುದು!)

ಕ್ಷೌರದ ಸ್ಥಿತ್ಯಂತರಗಳನ್ನು ತುಲನಾತ್ಮಕ ವಿಶ್ಲೇಷಿಸುವುದರಲ್ಲಿ ಮಗ್ನನಾಗಿದ್ದ ನನ್ನ ಮೈಮುಟ್ಟೆಚ್ಚರಿಸಿ ಕೇಶಕೌಶಲಿ ಕೇಳಿದ:

"ಸೀಸರೋ, ಮಿಶಿನ್ನೋ? ಶಾರ್ಟೋ, ಸೈಡೋ, ಸ್ಟೆಪ್‌ಕಟ್ಟಿಂಗೋ?"

ನೋಡಿದರೆ ಆರುಷ್ ಪಟ್ಟಾಭಿಷೇಕಕ್ಕಾಗಿ ಪೀಠಾರೋಹಣಗೈದಿದ್ದ. ಟೀವಿ ಹಾಡಿನ ಜೋಶ್‌ನಲ್ಲಿ ಮುಳುಗಿದ್ದ ಆರ್ಯನಿಗೆ, ಮೊದಲ ಪೀಠಾರೋಹಣದ ಸವಾಲಿಗಾದ ನಷ್ಟದ ಅನಾಹುತ ಅರಿವಾಗಿರಲಿಲ್ಲ. "ರೇಜರ್ ಬೇಡ, ಮಿಶನ್ ಆದೀತು. ಶಾರ್ಟ್ ಆಗಿರಲಿ" ಎಂದೆ. ತಲೆ ಹಿಂಬದಿ ಮಿಶನ್ ಆಡಿಸಿ ಕೂದಲು ಕತ್ತರಿಸುವಾಗ, ಕಚಗುಳಿಯಾಗಿ ಆರುಷ್ ಮಿಸುಕಾಡತೊಡಗಿದ. "ತಲೆ ಹಿಡ್ಕೊಳ್ಳಿ ಸಾರ್" ಎಂದ ಕೇಶಕೌಶಲಿ ಆದೇಶ ಪರಿಪಾಲಿಸಿದೆ. ಕನ್ನಡಿಯಲ್ಲಿ ಕಾಣುತ್ತಿದ್ದ ನನ್ನತ್ತ ವಾರೆನೋಟ ಬೀರಿ ಆರುಷ್ ಗೆಲುವಿನ ಮುಗುಳ್ನಗುತ್ತಿದ್ದ.

ಕ್ಷೌರಿಕ ತಮ್ಮ ಇನ್ನಿಲ್ಲವಾದ ಸುದ್ದಿ ಕಳೆದವಾರವಷ್ಟೇ ಊರಿಂದ ಬಂದಿತ್ತು. ಹಿರಿಯರ ಅಂದಾಜಿನ ಪ್ರಕಾರ ಅವ ನೂರರ ಗಡಿ ದಾಟಿದ್ದ. ತೊಂಬತ್ತರ ಮೇಲೆಂಬುದಂತೂ ನಿಸ್ಸಂಶಯ. ಬ್ರಿಟಿಷರ ಭಾರತ, ಮೈಸೂರು ಅರಸರ ಆಳ್ವಿಕೆಯಲ್ಲಿ ಜನಿಸಿದ ತಮ್ಮ, ಮಲೆನಾಡಿನ ಫ್ಯೂಡಲಿಸಂನ ಹಿಡಿತಕ್ಕೆ ಸಿಲುಕಿ ನಲುಗಿದವ. ಬೆಳೆಬೆಳೆಯುತ್ತಲೇ ಭಾರತ ಸ್ವಾತಂತ್ರ್ಯವನ್ನೂ, ಅರಸರರಾಳ್ವಿಕೆಯಿಂದ ಮೈಸೂರು, ಫ್ಯೂಡಲ್ ವ್ಯವಸ್ಥೆಯಿಂದ ಮುಕ್ತಿ ಪಡೆದ ಮಲೆನಾಡನ್ನೂ – ಹೀಗೆ ಬಗೆಬಗೆ ಸಂಕ್ರಮಣಾವಸ್ಥೆ ಕಂಡುಂಡವ. ಅದಕ್ಕಿಂತಲೂ ಹೆಚ್ಚಾಗಿ ನಮ್ಮ ಸಮಾಜದ ಜಾತಿ ವ್ಯವಸ್ಥೆ ಕಪಿಮುಷ್ಟಿ ಹಿಡಿತಕ್ಕೆ ಸಿಲುಕಿ ನೊಂದು ಬೆಂದವ. ಅಸ್ಪೃಶ್ಯತೆ ಬೆನ್ನು ಬಿದ್ದ ಬೇತಾಳವಾಗಿ ಕಾಡದೆ ಎಲ್ಲಾ ಜಾತಿ ವರ್ಗದವರಿಗೂ ಸ್ಪೃಶ್ಯನಾಗಿದ್ದರೂ, ಕ್ಷೌರಿಕ ಎಂಬ ಅಸಡ್ಡೆ, ನಿಕೃಷ್ಟತೆ, ಕಟ್ಟುಪಾಡುಗಳಿಗೆ ಸಿಲುಕಿ ನಲುಗಿದವ; ಕ್ಷೌರಿಕ